ಠಾಣೆಯಲ್ಲಿ ಕೇಸ್ ಫೈಲ್ ಮಾಡಿದರೆ ಬರುವುದೇನೆಂದು ಅವರೇ ರಿಪೋರ್ಟ್ ತೋರಿಸಿದ್ದಾರೆ. ಕನಿಷ್ಠ ಡಿ.ಎನ್.ಎ ಪರೀಕ್ಷೆ ಕೂಡ ಇಲ್ಲದೆ ಒಂದೊಂದು ಪೊಲೀಸ್ ಠಾಣೆಯಲ್ಲಿ ಎಷ್ಟೊಂದು ರೇಪ್ ಕಿಟ್‌ಗಳು ಬ್ಯಾಕ್‌ಲಾಗ್‌ನಲ್ಲಿ ಇರುವುದನ್ನು ನೀನೇ ನೋಡಿದ್ದಾಯಿತು. ಸೆಟಲ್ಮೆಂಟ್ ಮಾಡಿಕೊಳ್ಳುವುದೇ ಒಳ್ಳೆಯದೆಂದು ನಮ್ಮ ಅನಿಸಿಕೆಯೂ ಹೌದು' ಮಡದಿಯ ಪರವಾಗಿಯೂ ತಾನೇ ಮಾತನಾಡಿದ ಪ್ರಸಾದ್. ಶ್ರಿಯಾ ತಾಯಿಯ ಕಡೆಗೆ ನೋಡಿದಳು.

'ಹೀಗೆ ಜರುಗಿರುವುದರಿಂದ ಸಿಟ್ಟು, ನೋವು ಇಲ್ಲವೆಂದು ತಿಳಿಯಬೇಡ. ಪೆಟ್ಟು ಬಿದ್ದರೆ ಔಷಧ ಹಾಕಿಕೊಳ್ಳುತ್ತೇವೆ ಅಲ್ಲವೇ? ಇದು ಅಷ್ಟೇ. ಅದಕ್ಕಿಂತಲೂ ಹೆಚ್ಚಾಗಿ ಇದಕ್ಕೆ ಇಂಪಾರ್ಟೆನ್ಸ್ ಕೊಡಬಾರದು. We should move on'

ಮೊದಲೇ ಆವೇಶದಲ್ಲಿದ್ದ ಸಂದೀಪ್, ತಂದೆ-ತಾಯಿ ಹೇಳಿದ ಸಲಹೆಯಿಂದಾಗಿ ಮತ್ತಷ್ಟು ಸಿಟ್ಟಿಗೆದ್ದು ಮುಖ ಕೆಂಪಾಯಿತು. ಶ್ರಿಯಾಳ ಮುಖ ಬಿಳುಚಿಕೊಂಡಿತ್ತು.

'ಕಾಲೇಜ್‌ನೊಂದಿಗೆ ಕೇಸ್ ಸೆಟಲ್ ಮಾಡಿಕೊಳ್ಳಬೇಕೆಂದು ಹೇಳುತ್ತಿರುವಿರಿ, ಅಷ್ಟೇ ಅಲ್ಲವೇ? ಒಬ್ಬ ಹೆಣ್ಣುಮಗಳಿಗೆ ಜರುಗಿದ ಅನ್ಯಾಯಕ್ಕಿಂತಲೂ, ಫುಟ್ಬಾಲ್ ಪ್ಲೇಯರ್ ತರುವ ಪಾಪ್ಯುಲಾರಿಟಿ ಮುಖ್ಯವೆಂದು ಹೇಳುವವರನ್ನು ಕ್ಷಮಿಸಿ ಬಿಟ್ಟುಬಿಡಬೇಕೆಂದು ಹೇಳುತ್ತಿದ್ದೀರಿ. ಅಷ್ಟೇ ಅಲ್ಲವೇ?'

ಶ್ರಿಯಾಳ ಒಂದೊಂದು ಮಾತೂ ನೆಟ್ಟಗೆ ಪ್ರಸಾದ್ ಎದೆಯಲ್ಲಿ ಚುಚ್ಚಿತು. ಗಾಯಗೊಂಡ ಹಕ್ಕಿಯಂತೆ ಒದ್ದಾಡಿದಳು ಮಾಲತಿ.

'ಇತರರ ಕೇಸುಗಳ ಕುರಿತು ಮಾತನಾಡುವುದು, ನೋವನ್ನು ಅನುಭವಿಸುವುದು ಬೇರೆ ಅಲ್ಲವೇ ಕಂದಾ?, ನಮಗೆ ನಿಮ್ಮ ಫ್ಯೂಚರ್ ಮುಖ್ಯ. ನ್ಯಾಯ ಸಿಗಬಹುದೆಂದರೆ ಕೇಸ್ ಹಾಕುವುದೋ, ಬೆನ್‌ಗೆ ಶಿಕ್ಷೆ ಬೀಳುವುದೋ ಮಾತ್ರ ಅಲ್ಲ ದೀಪೂ. ನಮಗೆ ಶ್ರಿಯಾ ಜೀವನ ಮುಖ್ಯವಾದದ್ದು. ಅದಕ್ಕಾಗಿಯೇ ರಾಜಿ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇವೆ' ಗಂಡ ಹೇಳಿದ ಮಾತನ್ನು ಬಾಯಿಪಾಠದಂತೆ ಹೇಳಿದಳು ಮಾಲತಿ.

'ಕಮಾನ್ ಮಾಮ್' ಸಂದೀಪ್ ಗಂಟಲಿನಲ್ಲಿ ಬೇಜಾರು. ಶ್ರಿಯಾಳ ಮುಖದಲ್ಲಿ ನೋವು.

'ಶ್ರಿಯಾಳ ಫ್ಯೂಚರ್ ಚೆನ್ನಾಗಿರಬೇಕು ಎಂದರೆ ಅರ್ಥ ಮದುವೆಯಾಗುವುದೇ ಅಲ್ಲವೇ?' ಸಂದೀಪ್ ಮಾತಿನಲ್ಲಿರುವ ಮೂದಲಿಕೆಯನ್ನು ಕೇಳಿ ಏನು ಮಾತನಾಡಬೇಕೆಂದು ತೋಚಲಿಲ್ಲ ಮಾಲತಿಗೆ.

ತನ್ನ ಬದುಕನ್ನು ಕುರಿತಾಗಿ ನಿರ್ಣಯ, ಅಭಿಪ್ರಾಯಗಳನ್ನು ಅವರವರು ಹೇಳುತ್ತಿದ್ದರೆ ಶ್ರಿಯಾಳಿಗೆ ಮತ್ತಷ್ಟು ನೋವಾಯಿತು. 'ನನ್ನ ನಿರ್ಣಯ ಕೇಳಿ. ಕಾಲೇಜನ್ನು Sue – ಮಾಡುತ್ತೇನೆ. ಕಂಪ್ಲೇಂಟ್ ತೆಗೆದುಕೊಳ್ಳುವುದನ್ನು ಬಿಟ್ಟಿದ್ದೇ ಅಲ್ಲದೆ, ಈ ವಿಷಯವನ್ನು ಇಲ್ಲಿಗೆ ಬಿಟ್ಟುಬಿಡಬೇಕೆಂದು ಸಲಹೆ ಕೊಟ್ಟಿರುವುದಕ್ಕಾಗಿ, ಬೆನ್‌ನನ್ನು ಸಸ್ಪೆಂಡ್ ಮಾಡದೇ, ಬೆನ್ ಫ್ಯಾಮಿಲಿಯೊಂದಿಗೆ ಮಾತಾಡಿ ನಮ್ಮನ್ನು ರಾಜಿಗೆ ಬರಬೇಕೆಂದು ಒತ್ತಾಯಪಡಿಸುತ್ತಿರುವುದಕ್ಕಾಗಿ' ನೇರವಾಗಿ ಹೇಳಿದಳು. ಸಂದೀಪನ ಕಣ್ಣಲ್ಲಿ ಪ್ರಶಂಸೆ. ಮಾಲತಿ, ಪ್ರಸಾದ್ ಸ್ವಲ್ಪ ಇಕ್ಕಟ್ಟಿನಲ್ಲಿ ಬಿದ್ದರು.

'ನೋಡು ಶ್ರಿಯಾ, ಈಗಿರುವ ಆವೇಶದಲ್ಲಿ ಕೇಸ್ ಮಾಡಬೇಕೆಂದು ಅನ್ನಿಸುತ್ತದೆ. ಆದರೆ, ಅದರಿಂದ ಬರುವುದೇನೂ ಇಲ್ಲ. ನಮ್ಮ ಮರ್ಯಾದೆಯನ್ನೂ ನಾವೇ ಹೊರಗೆಡವುದನ್ನು ಬಿಟ್ಟು. ದಯಮಾಡಿ ನಿನ್ನ ನಿರ್ಣಯವನ್ನು ಬದಲಾಯಿಸಿ ಕೊಂಡರೆ ಒಳ್ಳೆಯದು. ನಾವು ಮಾತ್ರ ಇದಕ್ಕೆ ಒಪ್ಪುವುದಿಲ್ಲ. ಸಾರೀ'

'ಇದರಲ್ಲಿ ವಿಕ್ಟಿಮ್ ನಾನು ಡ್ಯಾಡ್. ನನ್ನಿಂದ ನಿಮ್ಮ ಪ್ರೆಸ್ಟೇಜ್ ಕಡಿಮೆಯಾಗುತ್ತದೆಯೆಂದರೆ ಸಾರೀ' ಶ್ರಿಯಾಳ ಮಾತಿನಲ್ಲಿ ಬೇಸರ.

'ಕೇಸ್ ಅಂದರೆ ತಮಾಷೆಯಲ್ಲ. ವರ್ಷಗಳು ಉರುಳುತ್ತವೆ. ಅವನನ್ನು ಜೈಲಿನಲ್ಲಿ ಇಟ್ಟರೆ, ನಿನಗೆ ಆದದ್ದನ್ನು ಮರೆತು ಬಿಡುವುದಕ್ಕಾಗುತ್ತದೆಯೇ? ಕಾಲೇಜ್‌ನವರನ್ನು ತಪ್ಪೆಂದು ರುಜುವಾತು ಪಡಿಸಿದರೆ ನಿನಗೆ ಬರುವುದಾದರೂ ಏನಿದೆ?' ಡಿಫೆನ್ಸ್ ಲಾಯರ್‌ಗಿಂತಲೂ ಹೆಚ್ಚಾಗಿ ವಾದಿಸುವ ಪ್ರಯತ್ನ ಮಾಡುತ್ತಿರುವ ತಂದೆಯನ್ನು ನಂಬಲಾರದವರಂತೆ ನೋಡಿದರು ಶ್ರಿಯಾ ಮತ್ತು ಸಂದೀಪ್.

'ಮನೆಯಲ್ಲಿ ಸಣ್ಣಪುಟ್ಟ ವಿಷಯಗಳ ಮೇಲೆ ಅಪ್ಪನೊಡನೆ ಜಗಳಮಾಡಿ ನಿನ್ನ ಮಾತನ್ನೆ ನಡೆಸಿಕೊಳ್ಳುತ್ತಿಯ? ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೂ ಇಷ್ಟೇ ಏನು?' ತಾಯಿಯನ್ನು ನೇರವಾಗಿ ಕೇಳಿದ ಸಂದೀಪ್.

'ನೀನು ಸಪೋರ್ಟ್ ಮಾಡುತ್ತಿರುವೆಯೆಂದು